ಶ್ರೀ ಬಿ. ರಾಚಯ್ಯ.—ಅನಧಿಕೃತವಾಗಿ ಹೊರಗಡೆ ದೇಶಕ್ಕೆ ಹೋದವರು ಕೆಲವರು ಇದ್ದಾರೆ. ಕೆಲವೊಂದು ಸ್ಥಳಗಳಿಗೆ ಹಾಕಿದರೂ ಹಾಜರಾಗದೇ ಇರುವವರೂ ಇದ್ದಾರೆ ಇದಕ್ಕೆ ಸಂಬಂಧಪಟ್ಟ ಹಾಗೆ ಶಿಸ್ತಿನ ಕ್ರಮವನ್ನು ಕೂಡ ನಾನು ತೆಗೆದುಕೊಂಡಿದ್ದೇನೆ.

ಶ್ರೀ ಡಿ. ಎ. ಚಿನ್ನಪ್ಪ.—ಅಧ್ಯಕ್ಷರೇ, ಕೊಡಗಿನಲ್ಲಿ.....

ಅಧ್ಯಕ್ಷರು.—ನಿಮಗೆ ಮೂರು ಸಲ ಅವಕಾಶ ಕೊಟ್ಟಿದ್ದೇನೆ ಮುಂದಿನ ಪ್ರಶ್ನೆ ಶ್ರೀ ಗೋಪಾಲ ಮಂಕುಂದ ಕಾನಡೆಯವರು.....

ಶ್ರೀ ಡಿ. ಎ. ಚಿನ್ನಪ್ಪ.—ಅಧ್ಯಕ್ಷರೇ.....

ಅಧ್ಯಕ್ಷರು.—ನೀವು ಏನು ಹೇಳಿದರೂ ಅದು ರೆಕಾರ್ಡ್ ಆಗುವುದಿಲ್ಲ ನಿಮಗೆ ಮೂರು ಸಲ ಅವಕಾಶ ಕೊಟ್ಟಿದ್ದೇನೆ. ಶ್ರೀ ಕಾನಡೆಯವರೇ ನೀವು ಪ್ರಶ್ನೆ ಕೇಳಿ.

ರಾಜ್ಯದಲ್ಲಿರುವ ಸೇಂದಿ ಮರಗಳ ಬಗ್ಗೆ

೧೩. ಶ್ರೀ ಗೋಪಾಲ್ ಮಂಕುಂದ ಕಾನಡೆ (ಸಿರ್ಸಿ).—ಮಾನ್ಯ ರಾಜ್ಯ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸೇಂದಿ ಮರಗಳ ಸಂಖ್ಯೆ ಎಷ್ಟು (ಪ್ರತಿ ಜಿಲ್ಲಾವಾರು ಅಂಕಿ-ಸಂಖ್ಯೆ ವಿವರ ನೀಡುವುದು) ?

ಆ) ಸೇಂದಿ ಮಾರಾಟ ಮಾಡಲು ಗುತ್ತಿಗೆದಾರರಿಗೆ ನೀಡುವಾಗ ಸರ್ಕಾರದವರು ಅನುಸರಿಸುವ ನಿಯಮಗಳೇನು ?

ಇ) ಗುತ್ತಿಗೆದಾರರು ಪರವಾನಿಗೆ ಹೊಂದಿರುವರೆ, ಹಾಗೂ ಪರವಾನಿಗೆ ಪಡೆದಲ್ಲದವರಿಗೆ ಗುತ್ತಿಗೆ ನೀಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ, ಇಂತಹವರ ಮೇಲೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಉ) ರಾಜ್ಯದಲ್ಲಿ ಮಾರಾಟವಾಗುತ್ತಿರುವ ಪ್ರತಿ ದಿವಸ ಸೇಂದಿಯಂ ಪ್ರಮಾಣವೆಷ್ಟು ?

ಊ) ಪ್ರತಿ ತಿಂಗಳಿಗೆ ಸರ್ಕಾರಕ್ಕೆ ಸೇಂದಿ ಮಾರಾಟದಿಂದ ಬರುವ ಆದಾಯವೆಷ್ಟು ಹಾಗೂ ಒಂದು ಲೀಟರ್ ಸೇಂದಿಗೆ ಪುಡಿ ಮಿಶ್ರಣ ಮಾಡಿ, ೫೦೦ ಲೀಟರ್‌ಗೆ ಹೆಚ್ಚಿಸಿ ಮಾರಾಟ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ, ?

ಋ) ಹಾಗಿದ್ದಲ್ಲಿ ಇಂತಹವರ ಮೇಲೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಡಿ. ಬಿ. ಇನಾಂದಾರ್ (ಅಬ್ಕಾರಿ ಮಂತ್ರಿಗಳು).—

ಅ) ಜಿಲ್ಲಾವಾರು ಸೇಂಧಿ ಮರಗಳಿಂದ ಸೇಂಧಿಯನ್ನು ಉತ್ತಾರು ಮಾಡಿದ ಪಟ್ಟಿಯನ್ನು ಲಗತ್ತಿಸಿದೆ:

DETAILS OF TREES TAPPAD DURING 1986–87

SL. No.	District	Date	Coco	Palm	Bagani	Total
1	Bangalore Urban	13518	26584	—	—	40102
2	Bangalore Rural	—	21831	—	—	21831
3	Belgaum	14504	—	—	—	14504
4	Bellary	8527	790	—	—	9317
5	Bidar	—	—	—	—	—
6	Bijapur	27351	—	—	—	27351
7	Chickmagalur	19382	7698	1000	—	28080
8	Chitradurga	27293	18128	—	—	45421
9	Dakshina Kannada	—	25040	25274	732	51046
10	Dharwad	20762	3483	—	—	24245
11	Gulbarga	159658	14053	—	—	173711
12	Hassan	21256	15102	—	1575	37933
13	Kodagu	—	—	—	—	—
14	Kolar	—	12965	—	—	12965
15	Mandya	10695	18098	—	—	28793
16	Mysore	10910	18250	—	—	29160
17	Raichur	68770	22384	—	—	91154
18	Shimoga	14146	6746	—	—	21162
19	Tumkur	50572	13517	—	—	64089
20	Uthara Kannada	—	1742	—	—	1742
	TOTAL	467614	226411	26274	2307	722606

ಆ) ಕರ್ನಾಟಕ ಅಬಕಾರಿ (ಮಧ್ಯವನ್ನು ಚಿಲ್ಲರೆಯಾಗಿ ವಾರಾಟ ಮಾಡುವ ಗುತ್ತಿಗೆಯ ಹಕ್ಕಿನ ನಿಯಮಗಳು ೧೯೬೯ ಮತ್ತು ಕರ್ನಾಟಕ ಅಬಕಾರಿ (ಮರಗಳಿಂದ ಸೇಂಧಿಯನ್ನು ಉತ್ತಾರು ಮಾಡುವ ನಿಯಮಗಳು ೧೯೬೭

ಇ) ಹೌದು

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

ಊ) ಸುಮಾರು ಐದು ಲಕ್ಷ ಲೀಟರುಗಳು

ಋ) ೪ ೮೯ ಕೋಟಿ ರೂಪಾಯಿಗಳು

ಕೆಲವೊಂದು ದೂರುಗಳು ಈ ವಿಷಯದಲ್ಲಿ ಬಂದಿರುವುವು.

೪೦) ಸೇಂಧಿಯನ್ನು ನಿಯತವಾಗಿ ರಾಸಾಯನಿಕ ಪರೀಕ್ಷೆಗೆ ಒಳಪಡಿಸಬೇಕೆಂದು ಎಲ್ಲ ಅಬಕಾರಿ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಶೇಂಧಿಯಲ್ಲಿ ಕಲಬೆರಕೆ ಕಂಡು ಬಂದರೆ ಅಂತಹವರ ಮೇಲೆ ಗುನ್ನೆಯನ್ನು ದಾಖಲು ಮಾಡಲಾಗುವುದು.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ' ಒಂದೊಂದಾಗಿ ಕೇಳಲೋ ಅಥವಾ ಒಂದೇ ಸಲಕ್ಕೆ ಕೇಳಲೋ ?

ಅಧ್ಯಕ್ಷರು.—ಕೇಳಿರಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಕಲಬೆರಕೆ ಮಾಡುತ್ತಾರೆಯೇ ಎಂದು ಕೇಳಿದರೆ ಹೌದು ' ಎಂದು ಒಪ್ಪಿ ಕೊಂಡಿದ್ದಾರೆ ಹಾಗಿದ್ದರೆ ಎಷ್ಟು ಕೇಸ್‌ಗಳನ್ನು ಕಲಬೆರಕೆ ಮೇಲೆ ರಿಜಿಸ್ಟರ್ ಮಾಡಿಕೊಂಡಿದ್ದಾರೆ ಎಂದು ಹೇಳಬೇಕು. ಕಲಬೆರಕೆ ಎಂದರೆ ಏನು ? ಇದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಕಲಬೆರಕೆ ಮಾಡಿದ್ದಾರೆಯೇ ಎಂದು ಪರೀಕ್ಷೆ ಮಾಡಲಿಕ್ಕೆ ಕಳಿಸಿದ್ದೇವೆ ಎಂದು ಹೇಳಿದ್ದಾರೆ ಹೀಗೆ ಪರೀಕ್ಷೆ ಮಾಡಲಿಕ್ಕೆ ಎಷ್ಟು ಕೇಸ್‌ಗಳನ್ನು ಕಳಿಸಿದ್ದಾರೆ ? ಎಷ್ಟು ಕೇಸುಗಳು ಸರ್ಕಾರದ ಗಮನಕ್ಕೆ ಬಂದಿದೆ, ಯಾರ ಯಾರ ಮೇಲೆ ಆರೋಪ ಇದೆ ? ಆ ಮೇಲೆ ಈ ಕಲಬೆರಕೆಯಿಂದ ಜನರ ಆರೋಗ್ಯಕ್ಕೆ ತೊಂದರೆ ಆಗುವುದು ಸರ್ಕಾರದ ಗಮನಕ್ಕೆ ಬಂದಿದ್ದರೂ ಇದನ್ನು ಮುಂದುವರೆಸಿಕೊಂಡು ಹೋಗಿರುವುದಕ್ಕೆ ಕಾರಣವೇನು ? ಇನ್ನೂ ಒಂದು ಪ್ರಶ್ನೆ ಎಂದರೆ, ಕೆಲವು ಸಚಿವರು ತಾವೇ ಸ್ವತಃ ಹೋಗಿ ಕೆಲವು ಕೇಸುಗಳನ್ನು ಪತ್ತೆ ಹಚ್ಚುತ್ತಾರೆ. ಇದೇ ಪ್ರಕಾರ ಘನ್ಯ ಮಂತ್ರಿಯವರು ತಾನೇ ಸ್ವತಃ ಹೋಗಿ ಕಲಬೆರಕೆ ಪ್ರಕರಣಗಳನ್ನು ಪತ್ತೆ ಹಚ್ಚಿದ್ದು ಯಾವುದಾದರೂ ಇದೆಯೆ ?

ಶ್ರೀ ಡಿ. ಬಿ. ಇನಾಂದಾರ್.—ನಮ್ಮ ಅಧಿಕಾರಿಗಳು ಹೋಗಿ ತನಿಖೆ ಮಾಡುತ್ತಾರೆ. ಈ ಸಂಬಂಧದಲ್ಲಿ ೫೫ ಕೇಸುಗಳನ್ನು ಬುಕ್ ಮಾಡಲಾಗಿದೆ. ಅಲ್ಲದೆ ಹಂತ ಹಂತವಾಗಿ ಅಧಿಕಾರಿಗಳು ಹೋಗಿ ಈ ಟಾಡಿಯನ್ನು ಆಗಾಗ ತಪಾಸಣೆ ಮಾಡುತ್ತಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸೇಂದಿ ಕಲಬೆರಕೆ ಮಾಡಿದವರು ಸಿಕ್ಕಿದ್ದಾರೆ. ಅವರು ಯಾರೆಂದು ಹೇಳಲಿಲ್ಲ, ಕ್ರಮ ಏನು ಕೈಗೊಂಡಿದ್ದೀರಿ ಎಂಬುದನ್ನು ಹೇಳಲಿಲ್ಲ. ಯಾರು ಸಿಕ್ಕಿದ್ದಾರೆ, ಎಷ್ಟು ಕೇಸ್‌ಗಳು ಆಗಿದೆ, ಅವರು ಯಾರು ಯಾರು ಎಂಬುದರ ವಿವರವನ್ನು ಹೇಳಬೇಕು. ಒಂದು ತಿಂಗಳಿಗೆ ೪-೫ ಕೋಟಿ ರೂಪಾಯಿ ಸೇಂದಿ ಬರುತ್ತದೆ. ಆ ಮರಗಳು ಸರ್ಕಾರದವರು ನೆಟ್ಟಿದ್ದೆ ಅಥವಾ ಖಾಸಗಿಯವರು ನೆಟ್ಟಿದ್ದೆ. ಒಂದು ದಿವಸಕ್ಕೆ ಒಂದು ಮರಕ್ಕೆ ಎಷ್ಟು ಸೇಂದಿ ಬರುತ್ತದೆ ಎಂಬುದನ್ನೂ ಹೇಳಬೇಕು.

ಶ್ರೀ ಡಿ. ಬಿ. ಇನಾಂದಾರ್.—೫೫ ಕೇಸ್‌ಗಳನ್ನು ಬುಕ್ ಮಾಡಿದ್ದೇವೆ, ಇದನ್ನು ಇನ್‌ವೆಸ್ಟಿಗೇಟ್ ಮಾಡುತ್ತಿದ್ದೇವೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಇದರಿಂದ ರಾಜ್ಯದ ಬೊಕ್ಕಸಕ್ಕೆ ಎಷ್ಟು ಕೋಟಿ ನಷ್ಟ ವಾಗುತ್ತಿದೆ, ಬಡವರ ಆರೋಗ್ಯದ ಮೇಲೆ ಎಷ್ಟು ದುಷ್ಪರಿಣಾಮ ಆಗುತ್ತದೆ, ಎಷ್ಟು ಕೇಸ್‌ಗಳನ್ನು ಹಿಡಿದಿದ್ದೀರಿ, ಏನು ಕ್ರಮ ಕೈಗೊಂಡಿದ್ದೀರಿ ?

(ಗೊಂದಲ)

ಅಧ್ಯಕ್ಷರು.—ಈ ತರಹ ಎಲ್ಲರೂ ಎದ್ದು ನಿಂತು ಮಾತನಾಡುವುದು ಬೇಡ. ಈಗಾಗಲೇ ನಿಮಗೆ ಎರಡು ಬಾರಿ ಅವಕಾಶ ಕೊಟ್ಟಿದ್ದೇನೆ, ಇನ್ನೊಂದು ಸಾರಿ ಕೇಳಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಎಷ್ಟನೇ ಇಸವಿಯಲ್ಲಿ, ಯಾರ ಮೇಲೆ ಕೇಸ್ ಆಗಿದೆ, ಅವರು ಯಾರು ಎಂಬುದನ್ನು ಹೇಳಿ ?

ಶ್ರೀ ಡಿ. ಬಿ, ಇನಾಂದಾರ್.—ಜೂನ್‌ನಲ್ಲಿ ಕೇಸ್ ಬುಕ್ ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು.—ಈಗಾಗಲೇ ತಮಗೆ ಮೂರು ಬಾರಿ ಅವಕಾಶ ಕೊಟ್ಟಿದ್ದೇನೆ. ಇನ್ನು ಅವಕಾಶ ಕೊಡುವುದಿಲ್ಲ, ಇನ್ನು ಮುಂದೆ ತಾವು ಹೇಳುವುದು ಯಾವುದೂ ರೆಕಾರ್ಡ್ ಆಗುವುದಿಲ್ಲ, ಮಾನ್ಯ ಖರ್ಗೆಯವರೇ ನೀವು ಸ್ವಲ್ಪ ಅವರಿಗೆ ಹೇಳಿ.

ಶ್ರೀ ಜಿ. ನಾರಾಯಣ ಕುಮಾರ್.—ಅಧ್ಯಕ್ಷರೇ, ಅವರು ಎಲ್ಲರೂ ಏಕೆ ಎದ್ದು ನಿಲ್ಲಿಬೇಕು ?

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಕಾನಡೆಯವರು ನೇರವಾದ ಪ್ರಶ್ನೆ ಕೇಳಿದ್ದಾರೆ. ಸೇಂದಿ ಕಲಬೆರಕೆ ಮಾಡುವವರು ಯಾರು, ಮೂರು ಜನರೋ ಅಥವಾ ಐದು ಜನರೋ, ಅವರು ಯಾರು. ಇದು ಒಂದು ಪ್ರಶ್ನೆ. ಎರಡನೆಯದು, ಸುಮಾರು ಒಂದು ತಿಂಗಳಿಗೆ ೪-೫ ಕೋಟಿ ರೂಪಾಯಿ ಹೆಂಡವನ್ನು ಮಾರುತ್ತಿದ್ದಾರೆ. ಈ ರೀತಿ ಅವರು ನೇರವಾಗಿ ಪ್ರಶ್ನೆ ಕೇಳುತ್ತಿದ್ದಾರೆ. ಇದಕ್ಕೆ ಉತ್ತರ ಕೊಡುವುದಕ್ಕೆ ಏನಾಗಿದೆ, ಅವರು ಏಕೆ ತಪ್ಪಿಸಿಕೊಳ್ಳಬೇಕು ?

ಶ್ರೀ ಡಿ. ಬಿ. ಇನಾಂದಾರ್.—ಇದರ ಬಗ್ಗೆ ಜೂನ್‌ನಲ್ಲಿ ಕೇಸ್ ಆಗಿದೆ. ೫ ಕೇಸ್‌ಗಳನ್ನು ಬುಕ್ ಮಾಡಿದೆ. ನಮ್ಮ ಇಲಾಖೆಯವರೇ ಬುಕ್ ಮಾಡಿದ್ದಾರೆ, ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ೫ ಜನರು ಯಾರು, ಅವರು ಯಾರು ಎಂದು ಹೇಳಿ. ಅವರು ಏನಾದರೂ ನಿಮಗೆ ಬೇಕಾದವರೇ.....

ಅಧ್ಯಕ್ಷರು.—ಸಾಕು ಈ ಪ್ರಶ್ನೆ. ಮುಂದಿನ ಪ್ರಶ್ನೆ ರೋಷನ್ ಬೇಗ್.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರವೇ ಬರಲಿಲ್ಲ. You have to withheld the question. ಅವರು ಪ್ರಶ್ನೆಗೆ ಉತ್ತರ ಕೊಡಬೇಕು. ಇಲ್ಲ ಎಂದರೆ ತಾವು, ಇದರ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ವಿಥ್‌ಹೆಲ್ಡ್ ಮಾಡಬೇಕು. ನಾಳೆಗೆ ಇದನ್ನು ಹಾಕಿ.

ಶ್ರೀ ಡಿ. ಬಿ. ಇನಾಮ್‌ದಾರ್.—ನಾನು ಹೇಳಿದ್ದೇನೆ ಐದು ಕೇಸ್‌ಗಳನ್ನು ಬುಕ್ ಮಾಡಿದ್ದೇವೆ, ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಈಗ ಹೆಸರು ಹೇಳುವುದು ಸೂಕ್ತವಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್ ವೆಸ್ಟಿಗೇಷನ್ ಇರಲಿ, ಅವರ ಹೆಸರೇನು ? ಇಂತಹ ಕೇಸಸ್ ಇವೆ- ಇನ್‌ವೆಸ್ಟಿಗೇಷನ್ ನಡೆದಿದೆ. ಅವರ ಹೆಸರು ಇದು ಎಂದು ಹೇಳಬಹುದಲ್ಲ. ಅದಕ್ಕೆ ಏನು ತೊಂದರೆ. ಸರಕಾರವು ಸಸ್ಪೆಂಡ್ ಮಾಡಿದ ಅಧಿಕಾರಿಗಳ ಹೆಸರನ್ನು ಹೇಳುವುದಿಲ್ಲವೇ? ಆಮೇಲೆ ಅವರು ನಿರ್ದೋಷಿಗಳು ಆಗಬಹುದು. ಒಂದೊಂದು ಸಲ ಇನ್ನೊಸೆಂಟ್ ಪೀಪಲ್ ಮೇಲೆ ಕೇಸ್ ರಿಜಿಸ್ಟರ್ ಮಾಡುತ್ತೇವೆ.

ಅಧ್ಯಕ್ಷರು.—ಅವರು ಹೆಸರು ಹೇಳಬೇಕೆಂದು ಇನ್‌ಸಿಸ್ಟ್ ಮಾಡುತ್ತಿದ್ದಾರೆ. ಹೆಸರು ಹೇಳಬಹುದೋ ಅಥವಾ ಬಿಡಬಹುದೋ ?

ಶ್ರೀ ಡಿ. ಬಿ. ಇನಾಮ್‌ದಾರ್.—ಇನ್‌ವೆಸ್ಟಿಗೇಷನ್ ನಡೆಯುತ್ತಿದೆ, ಚಾರ್ಜ್‌ಶೀಟ್ ಅದನಂತರ ವರ ಹೆಸರನ್ನು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ತಾವೂ ಸಹಿತ ಅಡ್ವೊಕೇಟ್ ಇದ್ದೀರಿ. ಎಫ್.ಐ.ಆರ್. ಆದಮೇಲೆ, ಯಾರ ಮೇಲೆ ಕೇಸ್ ಬುಕ್ ಮಾಡಿದೆಯೋ ಅವರ ಹೆಸರನ್ನು ಹೇಳಬಹುದು ಇನ್‌ವೆಸ್ಟಿಗೇಷನ್ ನಂತರ ಅವರು ಅಕ್ವಿಟ್ ಆದರೂ ಆಗಬಹುದು. ಹೆಸರು ಹೇಳುವುದಕ್ಕೆ ಏನು ತೊಂದರೆ ಇದೆ. ಕೇಸ್ ರಿಜಿಸ್ಟರ್ ಮಾಡಿರುತ್ತೀರಿ, ಈ ಕಲಬೆರಕೆ ಮಾಡತಕ್ಕಂಥ ಜನರು ಯಾರು, ಏತಕ್ಕೆ ಅವರನ್ನು ಶೀಲ್ಡ್ ಮಾಡುತ್ತೀರಿ ?

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಚಾರ್ಜ್‌ಶೀಟ್ ಹಾಕಿದ ನಂತರ ಅವರ ಹೆಸರುಗಳನ್ನು ಸಭೆಗೆ ತಿಳಿಸುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಫ್. ಐ. ಆರ್. ನಲ್ಲಿ ಯಾರ ಹೆಸರು ಇದೆ. ಚಾರ್ಜ್ ಶೀಟ್ ಲೇಟರ್ ಸ್ಟೇಜ್. You have registered the case against them, therefore, we would like to know who are those people against whom you have filed FIR.

ಶ್ರೀ ಗೋಪಾಲ ಮಯಕುಂದ ಕಾನಡೆ.—ಅಧ್ಯಕ್ಷರೇ, ಇದನ್ನು ತಿಳಿದುಕೊಳ್ಳುವುದಕ್ಕೆ ನಮಗೆ ಹಕ್ಕು ಉಂಟೋ ಇಲ್ಲವೋ ಹೇಳಿಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸರಕಾರ ಅವರನ್ನು ಪ್ರೊಟೆಕ್ಟ್ ಮಾಡುತ್ತಿದೆ ಎಂಬ ಆಪಾದನೆಯನ್ನು ಮಾಡಬೇಕಾಗುತ್ತದೆ. ಹೆಸರು ಹೇಳುವುದಕ್ಕೆ ತಯಾರಾಗಿಲ್ಲ ಎಂದರೆ ಏನು ಕಾರಣ ?

ಶ್ರೀ ಡಿ. ಬಿ. ಇನಾಮ್‌ದಾರ್.—ಶ್ರೀ ಗುರುಸ್ವಾಮಿ, ಟಾಡಿ ಕಂಟ್ರಾಕ್ಟರ್ ಚಿತ್ರದುರ್ಗ, 5 cases have been booked against him.....

ಅಧ್ಯಕ್ಷರು.—ಆಯಿತು, ಇದು ಮುಗಿಯಿತು. ಇನ್ನು ರೋಶನ್ ಬೇಗ್‌ರವರು ತಮ್ಮ ಪ್ರಶ್ನೆ ಕೇಳಬಹುದು.

ಶ್ರೀ ಆರ್. ರೋಶನ್ ಬೇಗ್.—ಅಧ್ಯಕ್ಷರೇ, ನಾನು ೧೫ರನೇ ಪ್ರಶ್ನೆಯನ್ನು ಕೇಳುತ್ತೇನೆ...

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ .....

(ಗೊಂದಲ)

ಶ್ರೀ ಗೋಪಾಲ ಮಯಕುಂದ ಕಾನಡೆ.—ಇವರಿಗೆ ಮೊದಲೂ ಕಂಟ್ರಾಕ್ಟ್ ಕೊಟ್ಟಿದ್ದೀರಾ, ಈಗಲೂ ಕೊಟ್ಟಿದ್ದೀರಾ ? ಇದರ ದುಷ್ಪರಿಣಾಮ ಏನಾಗಿದೆ.....

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಅವರಿಗೆ ತಾವು ಹೇಳಬೇಕು.

ಶ್ರೀ ಗೋಪಾಲ ಮಯಕುಂದ ಕಾನಡೆ.—ಇದರಿಂದಾಗುವ ದುಷ್ಪರಿಣಾಮ ಏನು ? ಸರಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ?.....

ಶ್ರೀ ಬಿ. ರಾಚಯ್ಯ.—ಸ್ವಾಮಿ, ತಾವು ನನ್ನನ್ನು ಕರೆದಿದ್ದೀರಿ, ಈ ರೀತಿ ಮಧ್ಯದಲ್ಲಿ ಮಾತ ನಾಡುತ್ತಿದ್ದರೆ, ನಾನು ಉತ್ತರ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ತಾವು ಅವರಿಗೆ ಪಾರನ್ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ಈ ರೀತಿ ಮಾಡಿದರೆ I will have to ask you to withdraw from the House.... ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಿ. ಮಧ್ಯೆ ಈ ರೀತಿ ಎದ್ದೆದ್ದು ಮಾನಾಡುವುದು ಸರಿಯಿಲ್ಲ.

ಶ್ರೀ ಗೋಪಾಲ ಮಯಕುಂದ ಕಾನಡೆ.—ಇದರ ಬಗ್ಗೆ ಸರಕಾರದ ನಿಲುವು ಏನು ಎಂದು ನನ್ನ ಪ್ರಶ್ನೆ.

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳಬೇಕು.

ರಾಜ್ಯದಲ್ಲಿನ ಖಾಸಗೀ ಮತ್ತು ಸರ್ಕಾರಿ ವೈದ್ಯಕೀಯ ಕಾಲೇಜುಗಳ ಬಗ್ಗೆ

೧೫ಶ. ಶ್ರೀ ಆರ್. ರೋಶನ್ ಬೇಗ್ (ಶಿವಾಜಿ ನಗರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿನ ಖಾಸಗೀ ಮತ್ತು ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಮತ್ತು ಎಲ್ಲೆಲ್ಲಿವೆ ? (ಖಾಸಗಿ ಕಾಲೇಜುಗಳನ್ನು ನಡೆಸುತ್ತಿರುವ ಆಡಳಿತ ಮಂಡಳಿಯ ಹೆಸರುಗಳನ್ನು ಕೊಡುವುದು).